# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2874 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 30.03.2022 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ವರೆಗೆ ಕಂದಾಯ ಇಲಾಖೆಯಿಂದ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು 94ಸಿ ಮತ್ತು 94ಸಿಸಿ ಯ ಅಡಿ ವಿತರಿಸಲಾದ ಹಕ್ಕುಪತ್ರಗಳೆಷ್ಟು? | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕು ತಹಶೀಲ್ದಾರರು 94ಸಿ ಮತ್ತು 94ಸಿಸಿ ಯಡಿ ವಿತರಿಸಲಾದ ಹಕ್ಕುಪತ್ರಗಳ ವಿವರಗಳು ಈ ಕೆಳಕಂಡಂತಿವೆ:- |

| ಕ್ರಮ ಸಂಖ್ಯೆ | ತಾಲ್ಲೂಕು | 94ಸಿ | 94ಸಿಸಿ |
|---|---|---|---|
| 1. | ಮಂಗಳೂರು | 151 | 16572 |
| 2. | ಬಂಟ್ವಾಳ | 13621 | 4096 |
| 3. | ಮೂಡಬಿದ್ರೆ | 484 | 454 |
| 4. | ಪುತ್ತೂರು | 7666 | 1250 |
| 5. | ಕಡಬ | 5905 | 0 |
| 6. | ಬೆಳ್ತಂಗಡಿ | 16156 | 404 |
| 7. | ಸುಳ್ಯ | 5399 | 340 |
| 8. | ಮುಲ್ಕಿ | 0 | 1644 |
| | **ಒಟ್ಟು** | **49382** | **24760** |

ಉಡುಪಿ ಜಿಲ್ಲೆಯಲ್ಲಿ ತಾಲ್ಲೂಕು ತಹಶೀಲ್ದಾರರು 94ಸಿ ಮತ್ತು 94ಸಿಸಿ ಯಡಿ ವಿತರಿಸಲಾದ ಹಕ್ಕುಪತ್ರಗಳ ವಿವರಗಳು ಈ ಕೆಳಕಂಡಂತಿವೆ:-

| ಕ್ರಮ ಸಂಖ್ಯೆ | ತಾಲ್ಲೂಕು | 94ಸಿ | 94ಸಿಸಿ |
|---|---|---|---|
| 1. | ಉಡುಪಿ | 306 | 750 |
| 2. | ಕುಂದಾಪುರ | 3048 | 6 |
| 3. | ಕಾರ್ಕಳ | 509 | 586 |
| 4. | ಬೈಂದೂರು | 1934 | 0 |
| 5. | ಬ್ರಹ್ಮಾವರ | 1222 | 672 |
| 6. | ಕಾಪು | 522 | 171 |
| 7. | ಹೆಬ್ರಿ | 241 | 0 |
| | **ಒಟ್ಟು** | **7782** | **2185** |

| | | |
|---|---|---|
| (ಆ) | 94ಸಿ ಮತ್ತು 94ಸಿಸಿ ಯ ಅಡಿ ಹಕ್ಕುಪತ್ರಗಳನ್ನು ಆರ್.ಟಿ.ಸಿ. ಯಲ್ಲಿ ದಾಖಲಿಸಲು ಕೈಗೊಂಡ ಕ್ರಮಗಳೇನು; | ಸುತ್ತೋಲೆ ಸಂಖ್ಯೆ: ಕಂಇ 13 ಎಲ್‌ಜಿಪಿ 2019 ದಿನಾಂಕ: 10.07.2019 ರಲ್ಲಿ ತಿಳಿಸಿರುವಂತೆ 94ಸಿ ಮತ್ತು 94ಸಿಸಿ ಯಡಿ ಮನೆಗಳನ್ನು ಸಕ್ರಮಗೊಳಿಸಲಾದ ಫಲಾನುಭವಿಗಳಿಗೆ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ. ಸದರಿ ಸುತ್ತೋಲೆಯಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.<br><br>ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 108(ಎಸ್) ರಡಿ ತಾತ್ಕಾಲಿಕವಾಗಿ ಸಕ್ರಮಗೊಳಿಸಿದ ಒಂದು ತಿಂಗಳೊಳಗಾಗಿ ಸಕ್ರಮಾತಿದಾರನು ನಿಗದಿಪಡಿಸಿದ ಮೊಬಲನ್ನು ಪಾವತಿಸತಕ್ಕದ್ದು ಹಾಗೂ ತನ್ನ ಖರ್ಚಿನಲ್ಲಿ ದಸ್ತಾವೇಜನ್ನು ನೋಂದಣಿ ಮಾಡಿಕೊಳ್ಳತಕ್ಕದ್ದು. ತದನಂತರ ನಿಗದಿಪಡಿಸಿದ ಪ್ರಾಧಿಕಾರವು ಜಮೀನು ಸಕ್ರಮಾತಿ ಆದೇಶವನ್ನು ಹೊರಡಿಸತಕ್ಕದ್ದೆಂದು ತಿಳಿಸಲಾಗಿದೆ.<br><br>ಮೇಲ್ಕಂಡಂತೆ ಸಕ್ರಮಾತಿ ಆದೇಶವನ್ನು (ಖಾಯಂ ಹಕ್ಕುಪತ್ರ) ಹೊರಡಿಸಿದ ನಂತರ ಸಕ್ರಮಗೊಳಿಸಿದ ಫಲಾನುಭವಿಗಳ ಹೆಸರಿಗೆ ಖಾತೆ ಮಾಡಲು ಖಾಯಂ ಹಕ್ಕುಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರ್ ರವರು ವಿಳಂಬಕ್ಕೆ ಆಸ್ಪದವಿಲ್ಲದಂತೆ ಮೂರು ದಿನಗಳೊಳಗಾಗಿ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರಗಳಿಗೆ (ಸಂದರ್ಭಾನುಸಾರ ಬಿ.ಬಿ.ಎಂ.ಪಿ./ ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯತಿ/ ಗ್ರಾಮ ಪಂಚಾಯ್ತಿಗಳಿಗೆ) ಕಳುಹಿಸತಕ್ಕದ್ದು.<br><br>ಅದರಂತೆ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ರವರು ಸಕ್ರಮಾತಿದಾರನಿಗೆ ಖಾತೆ ಮಾಡಲು ಸಂಬಂಧಿಸಿದ ಪ್ರಾಧಿಕಾರಗಳಿಗೆ ಹಕ್ಕುಪತ್ರದ ಪ್ರತಿ ಸಲ್ಲಿಸಿದ ನಂತರ ಸಂಬಂಧಪಟ್ಟ ಪ್ರಾಧಿಕಾರಗಳು ಸಕ್ರಮಾತಿದಾರನಿಂದ ದಾಖಲೆಗಳನ್ನು ಪಡೆದು ಅವನ ಹೆಸರಿಗೆ ತೆರಿಗೆ ನಿರ್ಧರಣೆ ಪಟ್ಟಿ ಮತ್ತು ತೆರಿಗೆಗಳ ಬೇಡಿಕೆ ವಸೂಲಿ ಮತ್ತು ಬಾಕಿ ರಿಜಿಸ್ಟರ್ ದಾಖಲಿಸಲು 45 ದಿನಗಳೊಳಗಾಗಿ ಕ್ರಮವಹಿಸತಕ್ಕದ್ದು ಹಾಗೂ ಸಂಬಂಧಿಸಿದ ಪ್ರಾಧಿಕಾರಗಳು ಸಕ್ರಮಾತಿದಾರನ ಹೆಸರಿಗೆ ತೆರಿಗೆ ನಿರ್ಧರಣೆ ಪಟ್ಟಿ ದಾಖಲಿಸಿದ ಬಗ್ಗೆ ತೆರಿಗೆ ನಿರ್ಧರಣೆ ಪಟ್ಟಿಯನ್ನು ತಹಶೀಲ್ದಾರರಿಗೆ ಕೂಡಲೇ ಒದಗಿಸತಕ್ಕದ್ದು. |

| | | |
|---|---|---|
| | | ಸ್ಥಳೀಯ ಪ್ರಾಧಿಕಾರಗಳಿಂದ ತೆರಿಗೆ ನಿರ್ಧರಣೆ ಪಟ್ಟಿ/ ಖಾತಾ ಎಕ್ಸ್ಟ್ರಾಕ್ಟ್ ಸ್ವೀಕೃತವಾದ ಕೂಡಲೇ ತಹಶೀಲ್ದಾರ್‌ರವರು ಖಾತಾ ಎಕ್ಸ್ಟ್ರಾಕ್ಟ್ ಹಾಗೂ ಹಕ್ಕುಪತ್ರದ ಮೂಲ ಪ್ರತಿಯನ್ನು ಸಂಬಂಧಿತ ಅರ್ಹ ಫಲಾನುಭವಿಗೆ ಹಸ್ತಾಂತರಿಸತಕ್ಕದ್ದು. (ಸುತ್ತೋಲೆಯ ಪ್ರತಿಯನ್ನು ಅನುಬಂಧದಲ್ಲಿರಿಸಿದೆ) |
| (ಇ) | ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು 94ಸಿ ಮತ್ತು 94ಸಿಸಿ ಯ ಅಡಿ ಹಕ್ಕುಪತ್ರ ವಿತರಣೆಗೆ ಸಂಬಂಧಿಸಿದ ಠರಾವು, ನಕ್ಷೆ ಹಾಗೂ ಚೆಕ್ ಬಂದಿಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲಾಗಿದೆಯೇ; ಈವರೆಗೆ ಹಸ್ತಾಂತರ ಮಾಡದಿದಲ್ಲಿ ಕಾರಣವೇನು; | ಹೌದು. |
| (ಈ) | ಸಾರ್ವಜನಿಕರಿಗಾಗುವ ತೊಂದರೆಯನ್ನು ತಪ್ಪಿಸಲು ದಾಖಲಾತಿಗಳನ್ನು ಎಷ್ಟು ದಿನಗಳಲ್ಲಿ ಹಸ್ತಾಂತರ ಮಾಡಲಾಗುವುದು? | ಸುತ್ತೋಲೆ ಸಂಖ್ಯೆ: ಕಂಇ 13 ಎಲ್‌ಜಿಪಿ 2019 ದಿನಾಂಕ: 10.07.2019 ರಲ್ಲಿ ತಿಳಿಸಿರುವಂತೆ ಸ್ಥಳೀಯ ಪ್ರಾಧಿಕಾರಗಳಿಂದ ಖಾತಾ ಎಕ್ಸ್‌ಟ್ರ್ಯಾಕ್ಟ್ (Khatha Extract) ಸ್ವೀಕೃತವಾದ ಕೂಡಲೇ ತಹಶೀಲ್ದಾರ್ ರವರು ಖಾತಾ ಎಕ್ಸ್‌ಟ್ರ್ಯಾಕ್ಟ್ (Khatha Extract) ಹಾಗೂ ಹಕ್ಕುಪತ್ರದ ಮೂಲ ಪ್ರತಿಗಳನ್ನು ಸಂಬಂಧಿತ ಅರ್ಹ ಫಲಾನುಭವಿಗೆ ಹಸ್ತಾಂತರಿಸಲಾಗುತ್ತಿದೆ. |

**(ಕಡತ ಸಂಖ್ಯೆ:ಕಂಇ 46 ಎಲ್‌ಜಿಎ 2022)**

**(ಆರ್.ಅಶೋಕ)**
ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 13 ಎಲ್‌ಜಿಪಿ 2019

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10-07-2019

**ಸುತ್ತೋಲೆ**

ವಿಷಯ: ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಸಿ ಮತ್ತು 94-ಸಿಸಿ ಅಡಿಯಲ್ಲಿ ಅನಧಿಕೃತ ವಾಸದ ಮನೆಗಳನ್ನು ಸಕ್ರಮಗೊಳಿಸಲಾದ ಫಲಾನುಭವಿಗಳಿಗೆ ಖಾತೆ ಮಾಡುವ ಕುರಿತು.

* * *

ಗ್ರಾಮಾಂತರ ಹಾಗೂ ನಗರ ಪ್ರದೇಶದ ಸರ್ಕಾರಿ ಜಮೀನುಗಳಲ್ಲಿ ದಿನಾಂಕ:01/01/2015ರ ಪೂರ್ವದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸುವ ಸಂಬಂಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಮತ್ತು 94ಸಿಸಿ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

<u>ಗ್ರಾಮಾಂತರ ಪ್ರದೇಶಗಳಲ್ಲಿ</u> <u>30x40 ಅಡಿ, 40x60 ಮತ್ತು 50x80</u> ಅಡಿ ಅಳತೆಯ ವಾಸದ ಮನೆಗಳನ್ನು ಸಕ್ರಮಗೊಳಿಸಲು ಅವಕಾಶವಿದ್ದು, ಅಳತೆಯನುಸಾರ ಕ್ರಮವಾಗಿ ರೂ.1000/-, ರೂ.2000/- ಮತ್ತು ರೂ.3000/- ಸಾಂಕೇತಿಕ ಶುಲ್ಕವನ್ನು ವಿಧಿಸಿ, ಸಕ್ರಮಗೊಳಿಸಲು ಅವಕಾಶವಿರುತ್ತದೆ. ಹಾಗೆಯೇ <u>ನಗರ ಪ್ರದೇಶಗಳಲ್ಲಿ</u> 20x30 ಹಾಗೂ ನಗರ ಪ್ರದೇಶದ ಬಫರ್ ಜೋನ್ ಪ್ರದೇಶಗಳಲ್ಲಿ 30x40 ಅಳತೆಯ ವಾಸದ ಮನೆಗಳನ್ನು ಸಕ್ರಮಗೊಳಿಸಲು ಅವಕಾಶವಿದ್ದು, ಅಳತೆಯನುಸಾರ ಕ್ರಮವಾಗಿ ರೂ.5000/- ಮತ್ತು ರೂ.10,000/- ಸಾಂಕೇತಿಕ ಶುಲ್ಕವನ್ನು ವಿಧಿಸಿ, ಸಕ್ರಮಗೊಳಿಸಲು ಅವಕಾಶವಿರುತ್ತದೆ. ಈ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಂಗವಿಕಲರು, ಮಾಜಿಸೈನಿಕರು ಮತ್ತು ಪೌರ ಕಾರ್ಮಿಕರಿಗೆ ಈ ಶುಲ್ಕದಲ್ಲಿ ಶೇ 50% ರಷ್ಟನ್ನು ವಿಧಿಸಬಹುದಾಗಿದೆ.

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಎಸ್ ರಡಿಯಲ್ಲಿ ತಾತ್ಕಾಲಿಕವಾಗಿ ಸಕ್ರಮಗೊಳಿಸಿದ ಒಂದು ತಿಂಗಳೊಳಗಾಗಿ ಸಕ್ರಮಾತಿದಾರನು ನಿಗದಿಪಡಿಸಿದ ಮೊಬಲಗನ್ನು ಪಾವತಿಸತಕ್ಕದ್ದು ಹಾಗೂ ತನ್ನ ಖರ್ಚಿನಲ್ಲಿ ದಸ್ತಾವೇಜನ್ನು ನೊಂದಣಿ ಮಾಡಿಸಿಕೊಳ್ಳತಕ್ಕದ್ದು. ತದನಂತರ ನಿಗದಿಪಡಿಸಿದ ಪ್ರಾಧಿಕಾರವು ಜಮೀನು ಸಕ್ರಮಾತಿ ಆದೇಶವನ್ನು ಹೊರಡಿಸತಕ್ಕದ್ದೆಂದು ತಿಳಿಸಲಾಗಿದೆ.

ಈ ಮೇಲ್ಕಂಡಂತೆ ಸಕ್ರಮಾತಿ ಆದೇಶವನ್ನು (ಖಾಯಂ ಹಕ್ಕುಪತ್ರ) ಹೊರಡಿಸಿದ ನಂತರ ಸಕ್ರಮಗೊಳಿಸಿದ ಫಲಾನುಭವಿಗಳ ಹೆಸರಿಗೆ ಖಾತೆ ಮಾಡಲು ಖಾಯಂ ಹಕ್ಕುಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರ್‌ರವರು ವಿಳಂಬಕ್ಕೆ ಆಸ್ಪದವಿಲ್ಲದಂತೆ 3 ದಿನಗಳೊಳಗಾಗಿ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರಗಳಿಗೆ (ಸಂದರ್ಭಾನುಸಾರ ಬಿಬಿಎಂಪಿ/ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿಗಳಿಗೆ) ಕಳುಹಿಸತಕ್ಕದ್ದು.

ಅದರಂತೆ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ರವರು ಸಕ್ರಮಾತಿದಾರನ ಹೆಸರಿಗೆ ಖಾತೆ ಮಾಡಲು ಸಂಬಂಧಿಸಿದ ಪ್ರಾಧಿಕಾರಗಳಿಗೆ ಅಂದರೆ ಸಂದರ್ಭಾನುಸಾರ ಗ್ರಾಮ ಪಂಚಾಯಿತಿ / ಪಟ್ಟಣ ಪಂಚಾಯಿತಿ / ಪುರಸಭೆ / ನಗರ ಸಭೆ / ಮಹಾನಗರ ಪಾಲಿಕೆ / ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಗಳಿಗೆ ಹಕ್ಕುಪತ್ರದ ಪ್ರತಿ ಸಲ್ಲಿಸಿದ ನಂತರ ಗ್ರಾಮ ಪಂಚಾಯತಿಗಳು ಸಕ್ರಮಾತಿದಾರನಿಂದ ದಾಖಲೆಗಳನ್ನು ಪಡೆದು ಅವನ ಹೆಸರಿಗೆ ತೆರಿಗೆ ನಿರ್ಧರಣೆ ಪಟ್ಟಿ (ನಮೂನೆ-9) ಮತ್ತು ತೆರಿಗೆಗಳ ಬೇಡಿಕೆ ವಸೂಲಿ ಮತ್ತು ಬಾಕಿ ರಿಜಿಸ್ಟರ್ (ನಮೂನೆ-11ಎ) ದಾಖಲಿಸಲು 45 ದಿನಗಳೊಳಗಾಗಿ ಕ್ರಮವಹಿಸತಕ್ಕದ್ದು ಹಾಗೂ ಗ್ರಾಮ ಪಂಚಾಯತಿಗಳು ಸಕ್ರಮಾತಿದಾರನ ಹೆಸರಿಗೆ ತೆರಿಗೆ ನಿರ್ಧರಣೆ ಪಟ್ಟಿ ದಾಖಲಿಸಿದ ಬಗ್ಗೆ ತೆರಿಗೆ ನಿರ್ಧರಣೆ ಪಟ್ಟಿ (Assessment List) ಅನ್ನು ತಹಶೀಲ್ದಾರ್‌ರವರಿಗೆ ಕೂಡಲೇ ಒದಗಿಸತಕ್ಕದ್ದೆಂದು ಈ ಮೂಲಕ ಸೂಚಿಸಿದೆ.

..2



Scanned by CamScanner

ಸಂದರ್ಭಾನುಸಾರ ಗ್ರಾಮ ಪಂಚಾಯತಿಗಳಿಂದ ತೆರಿಗೆ ನಿರ್ಧರಣೆ ಪಟ್ಟಿಯನ್ನು ಸ್ವೀಕರಿಸಿದ ಕೂಡಲೇ ಅಥವಾ ಸಂಬಂಧಿಸಿದ ಪ್ರಾಧಿಕಾರಗಳಿಂದ ಖಾತಾ ಎಕ್ಸ್‌ಟ್ರ್ಯಾಕ್ಟ್ (Khatha Extract) ಸ್ವೀಕೃತವಾದ ಕೂಡಲೇ ತಹಶೀಲ್ದಾರ್‌ರವರು ಖಾತಾ ಎಕ್ಸ್‌ಟ್ರ್ಯಾಕ್ಟ್ (Khatha Extract) ಹಾಗೂ ಹಕ್ಕುಪತ್ರದ ಮೂಲ ಪ್ರತಿಯನ್ನು ಸಂಬಂಧಿತ ಅರ್ಹ ಫಲಾನುಭವಿಗೆ ಹಸ್ತಾಂತರಿಸತಕ್ಕದ್ದು.

ಈ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕ ಹಾಗೂ ಶಿಸ್ತುಬದ್ಧ ರೀತಿಯಲ್ಲಿ ನಡೆಸತಕ್ಕದ್ದೆಂದು ಹಾಗೂ ಯಾವುದೇ ಅರ್ಹ ಫಲಾನುಭವಿಗೆ ಅನಗತ್ಯ ದಾಖಲೆಗಳಿಗಾಗಿ ತೊಂದರೆ ಕೊಡತಕ್ಕದ್ದಲ್ಲವೆಂದು ಈ ಮೂಲಕ ತಿಳಿಸಿದೆ.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

(ಎಲ್.ಕೆ. ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
(ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ.

(ಡಾ: ರಾಜ್‌ಕುಮಾರ್ ಖತ್ರಿ)
ಸರ್ಕಾರದ ಅಪರ ಮುಖ್ಯ
ಕಾರ್ಯದರ್ಶಿ,
ಕಂದಾಯ ಇಲಾಖೆ.

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಕಲಬುರಗಿ / ಬೆಳಗಾವಿ ವಿಭಾಗಗಳು.
2. ಆಯುಕ್ತರು, ಬಿಬಿಎಂಪಿ ಹಾಗೂ ಜಂಟಿ / ಉಪ ಆಯುಕ್ತರುಗಳು, ಬಿಬಿಎಂಪಿ ವಲಯಗಳು.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳು.
6. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.(ಆಯಾ ಜಿಲ್ಲಾಧಿಕಾರಿಗಳ ಮುಖಾಂತರ)
7. ಎಲ್ಲಾ ಉಪ ವಿಭಾಗಾಧಿಕಾರಿಗಳು / ತಹಶೀಲ್ದಾರ್‌ಗಳು-(ಜಿಲ್ಲಾಧಿಕಾರಿಗಳ ಮುಖಾಂತರ).
8. ಎಲ್ಲಾ ನಗರಸಭೆ ಆಯುಕ್ತರು/ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು- (ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಮುಖಾಂತರ)
9. ಎಲ್ಲಾ ತಾಲ್ಲೂಕಿನ ಕಾರ್ಯನಿರ್ವಹಣಾಧಿಕಾರಿಗಳು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು-(ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಸಿಇಒ ಮುಖಾಂತರ).
10. ಹೆಚ್ಚುವರಿ ಪ್ರತಿ / ಬಿಡಿ ಪ್ರತಿಗಳು.

**ಪ್ರತಿಯನ್ನು:**

1. ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸನ್ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸನ್ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಎಲ್ಲಾ ಉಪ ಕಾರ್ಯದರ್ಶಿಗಳು / ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

*****

Scanned by CamScanner